ಜಾಗದ ತನಕ ನಡೆದುಕೊಂಡು ಹೋದೆ. ಅವನು ಅದೆಷ್ಟು ಸುಲಭವಾಗಿ ಕನ್ನಡದ ಅಕ್ಷರಗಳನ್ನು ಜೋಡಿಸಿಬಿಟ್ಟನಲ್ಲಾ ಎಂಬ ಅಚ್ಚರಿ ನನ್ನ ಮನಸ್ಸನ್ನೆಲ್ಲಾ ಆಕ್ರಮಿಸಿಕೊಂಡು ಬಿಟ್ಟಿತ್ತು. ಅವನ ಬಗ್ಗೆ ವಿಶೇಷ ಪ್ರೀತಿಯೂ ಮೂಡಿತ್ತು.

"ಕನ್ನಡ ಅಕ್ಷರಗಳು ನಿಂಗೆ ಹೇಗೆ ಗೊತ್ತು ವೆಂಕಯ್ಯ?" ಎಂದು ಕುತೂಹಲದಿಂದ ಕೇಳಿದೆ. ವಾತಾವರಣ ತಣ್ಣಗಿತ್ತು. ಹುಣ್ಣಿಮೆಯ ದಿನವಾದ್ದರಿಂದ ಬೆಳದಿಂಗಳು ಎಲ್ಲೆಲ್ಲಿಯೂ ಚೆಲ್ಲಾಡಿತ್ತು. ನನ್ನ ಪ್ರಶ್ನೆಗೆ ವೆಂಕಯ್ಯ ನಾಚಿಕೆಯಿಂದ ನಕ್ಕ. ಕಡುಗಪ್ಪು ಬಣ್ಣದ, ತೆಳ್ಳನೆಯ ದೇಹದ, ಎತ್ತರದ ನಿಲುವಿನ ವೆಂಕಯ್ಯ ನೋಡಲು ಆಕರ್ಷಕವಾಗಿದ್ದ.

"ಸಿಕ್ಕಾಪಟ್ಟೆ ಸಿನಿಮಾ ನೋಡ್ತೀನಿ ಸಾರ್. ಚಿಕ್ಕಂದಿನಿಂದಲೂ ಎಲ್ಲಾ ವಾಲ್‌ಪೋಸ್ಟರ್ ಓದೋ ಅಭ್ಯಾಸ ನಂಗೆ. ಬೆಂಗಳೂರಿಗೆ ಬಂದ ಮೇಲೆ ಜಾಸ್ತಿ ಕನ್ನಡ ಸಿನಿಮಾ ಪೋಸ್ಟರ್ ಕಾಣಿಸೋದು. ಅದನ್ನೇ ಓದೋಕೆ ಶುರು ಮಾಡಿಕೊಂಡೆ. ತೆಲುಗು – ಕನ್ನಡ ಅಕ್ಷರಕ್ಕೆ ಅಂತಹ ವ್ಯತ್ಯಾಸವೇನಿಲ್ಲ. ಬರೀ ಒತ್ತುಕೊಂಬು – ದೀರ್ಘದ ಚಿಹ್ನೆಗಳು ಸ್ವಲ್ಪ ಬೇರೆ. ಎಲ್ಲಿ ಕನ್ನಡ ಅಕ್ಷರಗಳು ಕಣ್ಣಿಗೆ ಬಿದ್ದರೂ, ಮನಸ್ಸು ಅದನ್ನು ಓದಿ ಬಿಡುತ್ತಿತ್ತು. ಆದ್ದರಿಂದ ಅಭ್ಯಾಸ ಆಗಿತ್ತು" ಎಂದು ಹೇಳಿದ.

ಅವನು ಬೈಕ್ ಹತ್ತಿ ಕುಳಿತ ಮೇಲೆ ನಾನು ಮತ್ತೊಂದು ಪ್ರಶ್ನೆ ಕೇಳಿದೆ. "ಇಷ್ಟೆಲ್ಲಾ ಜಾಣ ಇದೀಯ. ಆದರೆ ಎಂಜಿನಿಯರಿಂಗ್‌ನಲ್ಲಿ ಅಷ್ಟು ಕಡಿಮೆ ಅಂಕ ಯಾಕೆ ಬಂದಿವೆ?" ಎಂದು ಸಹಜವಾಗಿ, ಅವನಿಗೆ ಅವಮಾನವಾಗದ ರೀತಿಯಲ್ಲಿ, ನಗುನಗುತ್ತಾ ಕೇಳಿದೆ. ಆ ಪ್ರಶ್ನೆಗೂ ನಾಚಿಕೊಂಡ.

"ಎಂಜಿನಿಯರಿಂಗ್ ಮೂರನೇ ವರ್ಷದಲ್ಲಿ ಒಬ್ಬ ಹುಡುಗಿಯ ಪ್ರೀತಿಯಲ್ಲಿ ಸಿಕ್ಕಿಬಿದ್ದೆ ಸಾರ್. ಓದಿನಲ್ಲಿ ಆಸಕ್ತಿನೇ ಹೊರಟು ಬಿಡ್ತು. ಅವಳನ್ನು ಬಿಟ್ಟರೆ ಬೇರೆ ಏನೂ ಬೇಡ ಅನ್ನಿಸೋದು. ಅವರ ಅಪ್ಪಅಮ್ಮಂಗೆ ವಿಷಯ ಗೊತ್ತಾಯ್ತು. ಆಕೆನ್ನ ಕೂಡಿ ಹಾಕೋದಕ್ಕೆ ಶುರು ಮಾಡಿದ್ರು. ಬೇರೆ ಮದುವೆ ಮಾಡೋದಕ್ಕೆ ತಯಾರಿ ಮಾಡಿದ್ರು. ಆಮೇಲಕ್ಕೆ ನಂಗೆ ಅವಳನ್ನ ಕಳಕೊಂಡು ಬಿಡ್ತೀನಿ ಅನ್ನೋ ಭಯವಾಯ್ತು. ಗೆಳೆಯರ ಸಹಾಯ ತೊಗೊಂಡು ಅವಳನ್ನು ಕೂಡಿಟ್ಟ ಕೊಠಡಿಯಿಂದ ಬಿಡಿಸಿಕೊಂಡು, ಇಬ್ಬರೂ ಓಡಿಹೋದ್ವಿ. ಸಿಂಹಾಚಲಂನ ನರಸಿಂಹಸ್ವಾಮಿ ಸನ್ನಿಧಾನದಲ್ಲಿ ಒಬ್ಬರಿಗೊಬ್ಬರು ಗೆಳೆಯರ ಸಾಕ್ಷಿಯಲ್ಲಿ ಮಾಲೆ ಬದಲಾಯಿಸಿಕೊಂಡು ಮದುವೆ ಮಾಡಿಕೊಳ್ಳೋದು ಅಂತ ನಿರ್ಧರಿಸಿ, ಮುಹೂರ್ತ ಫಿಕ್ಸ್ ಮಾಡಿಬಿಟ್ಟೆವು. ಗೆಳೆಯರೆಲ್ಲಾ ವಿಶಾಖಪಟ್ಟಣಕ್ಕೆ ಬಂದು ನಮ್ಮ ಜೊತೆ ಕೂಡಿಕೊಂಡರು. ಆ ಊರಿಗೆ ಸಿಂಹಾಚಲಂ ತುಂಬಾ ಹತ್ತಿರ ಸಾರ್. ಹುಡುಗಿ ಅಪ್ಪಅಮ್ಮ ನಮ್ಮಿಬ್ಬರನ್ನ ಕೊಲ್ಲೋದಕ್ಕೆ ರೌಡಿಗಳನ್ನ ನಿಯಮಿಸಿದ್ದಾರೆ ಅಂತ ಗೆಳೆಯರು ಹೇಳಿ, ಮದುವೆಗೆ ಅವಸರ ಮಾಡಿದ್ರು. ದೇವಸ್ಥಾನಕ್ಕೆ ಹೋದ ಮೇಲೆ ನನ್ನ ಹುಡುಗಿ ಮನಸ್ಸು ಬದಲಾಯಿಸಿಬಿಟ್ಟಳು. ಒಂದೇ ಸಮನೆ ಅಳೋದಕ್ಕೆ ಶುರು ಮಾಡಿಬಿಟ್ಟಳು. ಅಪ್ಪಅಮ್ಮನ ಒಪ್ಪಿಗೆಯಿಲ್ಲದೆ ನಾನು ಮದುವೆ ಆಗಲ್ಲ, ಹೇಡಿಯಂತೆ ನಾನು ಮದುವೆಯಾಗಲಾರೆ ಅಂತ ಹೇಳಲಾರಂಭಿಸಿದಳು. ಅಳುವ ಹುಡುಗಿಯ ಜೊತೆಗೆ ಮದುವೆಯಾಗುವುದಾದರೂ ಹೇಗೆ? ಕೊನೆಗೆ ಮದುವೆಯನ್ನು ಕ್ಯಾನ್ಸಲ್ ಮಾಡಿ, ಊರಿಗೆ ವಾಪಸ್ಸು ಬಂದಿದ್ದಾಯ್ತು. ಆದರೆ ಸ್ವಲ್ಪೇ ದಿನದಲ್ಲಿ ಆಕೆ ಅಪ್ಪ ತೋರಿಸಿದ ಹುಡುಗನನ್ನು ಮದುವೆಯಾಗಿ ನನ್ನನ್ನು ಮರೆತುಬಿಟ್ಟಳು ಸಾರ್. ನಂಗೆ ಮೋಸ ಮಾಡಿಬಿಟ್ಟಳು. ಅವು ಅತ್ಯಂತ ಕಷ್ಟದ ದಿನಗಳು" ಎಂದು ಕಣ್ಣು ತುಂಬಿಕೊಂಡ.